Tumbe Group of International Journals
ISSN: 2581-8511
A Multidisciplinary Journal
Issue-2
Volume-1
May-Aug: 2018

# ಮೈಸೂರು ಜಿಲ್ಲೆಯ ದೊಂಬಿದಾಸ ಜನಾಂಗ: ನಂಬಿಕೆ-ಆಚರಣೆಗಳು

**ಡಾ. ಮಾದಯ್ಯ ಮಾಕನಹಳ್ಳಿ**

ದೊಂಬಿದಾಸ ಜನಾಂಗದ ಹಿನ್ನೆಲೆ

ಗಾಯನ ಕಲೆಯನ್ನು ತಮ್ಮ ಬದುಕಿನ ಜೀವಾಳವನ್ನಾಗಿಸಿಕೊಂಡು, ಹಳ್ಳಿಗರ ಮನಸ್ಸಿಗೆ ಮುದ ನೀಡುವ ಹಾಡುಗಳನ್ನು ಹಾಡುತ್ತ; ಒಂದು ಕಡೆ ನೆಲೆಯೂರದೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಹರಿದು ಹಂಚಿ ಹೋಗಿರುವ ಸಮುದಾಯವೆ ದೊಂಬಿದಾಸರು. ಇವರು ಅರೆ-ಅಲೆಮಾರಿ ಜನಾಂಗ. ತಮ್ಮ ಬಲಗೈಯಲ್ಲಿ 'ಏಕತಾರಿ' ಯನ್ನು ನುಡಿಸುತ್ತ, ಎಡಗೈಯಲ್ಲಿ 'ಚಿಟಿಗೆ' ಯನ್ನು ಬಾರಿಸುತ್ತ, ಕಂಕುಳಿಗೆ ಜೋಳಿಗೆ ನೇತು ಹಾಕಿಕೊಂಡು, ಹೊಟ್ಟೆಪಾಡಿಗಾಗಿ ಅವರಿವರ ಮನೆಯಲ್ಲಿ ಭಿಕ್ಷೆ ಬೇಡುತ್ತ ಹೊಟ್ಟೆ ಹೊರೆದವರು ಇವರು. ಜನಪ್ರಿಯ ವೃತ್ತಿಗಾಯಕರು ಮಾತ್ರವಲ್ಲದೆ, ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತ, ಅಲ್ಲಿ ನಾಟಕವನ್ನು ಆಡುತ್ತ, ಯಕ್ಷಗಾನವನ್ನು ಕೂಡ ಪ್ರದರ್ಶಿಸುತ್ತ, ಜನರ ಹೃದಯದಲ್ಲಿ ಅಪರೂಪದ ಸ್ಥಾನವನ್ನು ಇವರು ಪಡೆದಿದ್ದಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವಿವಿಧ ಭಾಗಗಳಲ್ಲಿ ಚದುರಿ ಹೋಗಿರುವ ಇವರು, ಉತ್ತರ ಕರ್ನಾಟಕದಲ್ಲಿ "ದುಂಬೇದಾಸ" ಎಂಬ ಹೆಸರಿನ ಮೂಲಕ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ಒಟ್ಟಿನಲ್ಲಿ 'ಏಕತಾರಿ' ಶೃತಿ ವಾದ್ಯದ ಮೂಲಕ ಎಂತಹ ಕಲ್ಲು ಮನಸ್ಸಿನವರನ್ನು ತಮ್ಮ ಕಲೆಯ ಮೂಲಕ ಕರಗಿಸುವ ಕಲೆಗಾರಿಕೆ ಇವರದು ಎಂದರೆ ಬಹುಶಃ ಅದು ಅತಿಶಯೋಕ್ತಿಯಲ್ಲ ಎನ್ನಬಹುದು.

ದೊಂಬಿದಾಸರನ್ನು 'ಹೆಣ್ಣುವೇಷದವರು' ಎಂದು ಕೂಡ ಕರೆಯುವ ವಾಡಿಕೆ ಇದೆ. ಈ ಬಗ್ಗೆ ಒಂದು ಸ್ವಾರಸ್ಯಕರವಾದ ಪುರಾಣ ಕತೆಯೆ ಇದೆ. ಇಬ್ಬರು ಗಂಡಸರು ಯಾವುದೋ ಒಂದು ದಾರಿಯಲ್ಲಿ ನಡೆದು ಬರುತ್ತಿರುತ್ತಾರೆ. ಪಾರ್ವತಿ ವಿಹಾರಾರ್ಥವಾಗಿ ಭೂಲೋಕದಲ್ಲಿ ವಿವಿಧ ಕಡೆಯಲ್ಲಿ ಸಂಚರಿಸುತ್ತಿರುತ್ತಾರೆ. ಈ ಸಂದರ್ಭದಲ್ಲಿ ಆಕೆಗೆ ಅಭಿಮುಖವಾಗಿ ಎದುರಾದ ಆ ಇಬ್ಬರು ಗಂಡಸರು ಆಕೆಯ ಸೌಂದರ್ಯಕ್ಕೆ ಸೋಲುತ್ತಲೆ ಆಕೆಯನ್ನು ಬಯಸುತ್ತಾರೆ. ಮದುವೆಯಾಗು ಎಂದು ಪೀಡಿಸುತ್ತಾರೆ. ಅವರ ಈ ಕೋರಿಕೆಯನ್ನು ತಿರಸ್ಕರಿಸಿದ ಪಾರ್ವತಿ ದೇವಿಯು, ಲೋಕಮಾತೆಯಾದ ನನ್ನನ್ನು ನೀವು ಬಯಸಿದ ಕಾರಣದಿಂದ ನಪುಂಸಕರಾಗಿರೆಂದು ಶಾಪ ನೀಡುತ್ತಾಳೆ. ತಾವು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತಪಟ್ಟುಕೊಂಡು, ತಮ್ಮ ಪುರುಷತ್ವ ಉಳಿಸಿಕೊಳ್ಳುವ ಸಲುವಾಗಿ ಹೆಣ್ಣುವೇಷ ಧರಿಸಿದರಂತೆ. ಹೀಗೆ ಹಾಡನ್ನು ಹಾಡುತ್ತ ಜನರನ್ನು ರಂಜಿಸಿದ ಇವರನ್ನು ಹೆಣ್ಣುವೇಷದವರು ಎಂದು ಕರೆಯುವ ಪದ್ಧತಿ ಆರಂಭವಾಯಿತಂತೆ. ಹೀಗೆ ದೊಂಗದಾಸ ಜನಾಂಗ, ದೊಂಬಿದಾಸರಾದ ಬಗೆಯನ್ನು ಅವರ ಕುಲ ಪುರಾಣಕತೆಯು ಪರಿಚಯಿಸಿದೆ.

ದೊಂಬಿದಾಸ ಸಮುದಾಯವನ್ನು ಕುರಿತಂತೆ ಬಿ.ಬಿ.ಮಹೀಶವಾಡಿಯವರು: "ದೊಂಬಿ-ದಾಸರು ಮುಖ್ಯವಾಗಿ ವೃತ್ತಿಗಾಯಕರು. ದಮ್ಮಡಿ ಬಾರಿಸುತ್ತ ಏಕತಾರಿ ಮಿಡಿಯುತ್ತ, ಅಭಿಮನ್ಯುವಿನ ಕತೆ, ರಾಮ-ಲಕ್ಷ್ಮಣರ ಕತೆ, ಪಾಂಡವರ ಕತೆ ಹೇಳುವುದರ ಜೊತೆಗೆ ಬಂಟರ ಕತೆಯನ್ನು ಹೇಳುತ್ತಾರೆ. ಸಂಗೊಳ್ಳಿರಾಯಣ್ಣ, ಸಿಂಧೂರಲಕ್ಷ್ಮಣ, ಕಟ್ಟೀಚನ್ನ, ಪವುಣಂಚಯ ಮೊದಲಾದ ಕನ್ನಡ ನಾಡಿನ ಸಾಮಾನ್ಯ ಜನತೆಯ ಮುಂದೆ ಅಸಾಮಾನ್ಯ ಸಾಹಸ ಮಾಡಿ ಮೆರೆದ ಬಂಟರ ಹಾಡುಗಳನ್ನು ಹೇಳುತ್ತಾರೆ. ಕಿತ್ತೂರ ಚೆನ್ನಮ್ಮ, ಮುಂಡರಗಿ ಭೀಮರಾಯ, ನರಗುಂದಬಂಡಾಯ, ಹಲಗಲಿ ಜಡಗಾಬಾಲಾರ

ಕಥೆಗಳನ್ನು ಸುಂದರವಾಗಿ ವೀರರಸ ಉಕ್ಕುವಂತೆ, ಮೈ ರೋಮಾಂಚನಗೊಳ್ಳುವಂತೆ ಹಾಡಿ ತೋರಿಸುತ್ತಾರೆ" (ಕನ್ನಡ ಕಥಾಸೃಷ್ಟಿ. ಪು.24)ಎಂದು ಹೇಳಿರುವ ಅಭಿಪ್ರಾಯ ನಿಜಕ್ಕೂ ಸ್ತುತ್ಯಾರ್ಹವೆ ಎನ್ನಬಹುದಾಗಿದೆ.

ದೊಂಬಿದಾಸ ಸಮುದಾಯ ತಲತಲಾಂತರದಿಂದ ಅವರ ಹಿರಿಯವರು ಆಚರಿಸಿಕೊಂಡು ಬಂದಿರುವ ವಿಚಾರಗಳನ್ನು ಮೈಗೂಡಿಸಿಕೊಂಡು, ಕಲೆಗೆ ಹೆಚ್ಚು ಬೆಲೆ ಕಟ್ಟಿದವರು ಎಂಬ ಮಾತಿಗೆ ಸಾಕ್ಷಿಯಾಗಿದ್ದಾರೆ. ಇವರು ತಮ್ಮ ಹಾಡುಗಾರಿಕೆಯಲ್ಲಿ ಕೇವಲ ಕತೆ, ಕಾವ್ಯ, ಪುರಾಣ, ಮತ್ತಿತರ ವಿಷಯಗಳನ್ನಷ್ಟೇ ಪ್ರಸ್ತಾಪಿಸುವುದಿಲ್ಲ. ಬದಲಾಗಿ ಕನ್ನಡನಾಡಿನ ಹಿರಿಮೆ, ಗರಿಮೆ, ಚರಿತ್ರೆಯ ಮೂಲಪುರುಷರು ಮತ್ತು ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯ ವಿವರವನ್ನು ತಮ್ಮ ಸಿರಿ ಕಂಠದಲ್ಲಿ ಹಾಡುವ ಮತ್ತು ಅಭಿನಯಿಸುವ ಮೂಲಕ ಪ್ರದರ್ಶಿಸಿ ಜನ ಮೆಚ್ಚುಗೆ ಪಡೆಯುವುದು ಪ್ರಶಂಸನೀಯವಾದುದಾಗಿದೆ.

**ಕಸುಬು**

ದೊಂಬಿದಾಸ ಜನಾಂಗವು ರಂಗಭೂಮಿ ಮತ್ತು ಯಕ್ಷಗಾನ ಪ್ರದರ್ಶನಕ್ಕೆ ತುಂಬ ಹೆಸರಾದವರು. ಇವರನ್ನು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಹೆಣ್ಣುವೇಷದವರು ಎಂದು ಕರೆಯುತ್ತಾರೆ. ಭಿಕ್ಷಾಟನೆ ಮಾಡುವ ಮೂಲಕ ಒಂದು ಊರಿನಲ್ಲಿ ತಳವೂರದೆ, ಏಕತಾರಿಯನ್ನು ಬಲಗೈಲಿ ಹಿಡಿದು ಚಿಟಿಗೆಯಲ್ಲಿ ಎಡಗೈಲಿ ಹಿಡಿದು ನುಡಿಸುವುದು ಈ ಸಮುದಾಯದವರು ತಲತಲಾಂತರದಿಂದ ರೂಪಿಸಿಕೊಂಡು ಬಂದಿರುವ ಕಸುಬಾಗಿದೆ. ಭಿಕ್ಷಾಟನೆ ಮಾಡುವುದೇ ಈ ಜನಾಂಗದ ಮೂಲ ಕಸುಬಾಗಿದೆ. ಆದರೆ ಇವರು ಬೆಳೆ ಬಂದಾಗ, ರೈತಾಪಿವರ್ಗ ಎಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆದು ಜೀವನ ಮಾಡುತ್ತಿರುತ್ತಾರೋ ಆ ಕಡೆಗೆ ಹೆಚ್ಚು ಮುಖ ಮಾಡುತ್ತಾರೆ. ಮೊದಮೊದಲು ಸಿಕ್ಕಸಿಕ್ಕ ಕಡೆ ಮನೆ, ಮಠ, ಮಂದಿರ, ಗುಡಿಗಳಲ್ಲಿ ತಂಗುತ್ತ ಜೀವನ ಸಾಗಿಸಿರುವ ನಿದರ್ಶನವೂ ಸಹ ಇದೆ. ಗಾಯನ, ನಾಟಕ, ಭಿಕ್ಷಾಟನೆ ಈ ಮೂರು ಮುಖ್ಯವಾಗಿ ಇವರ ಜೀವನ ನಿರ್ವಹಣೆಯ ನಿಜವಾದ ಕಸುಬಾಗಿತ್ತು. ಕಂಕುಳಿಗೆ ಜೋಳಿಗೆ ನೇತುಹಾಕಿಕೊಂಡು ಇಬ್ಬರು ಮತ್ತು ಮೂವರು ಭಿಕ್ಷಾಟನೆ ಮಾಡಲು ಹೋಗುವುದು ಇವರ ವಾಡಿಕೆಯಾಗಿತ್ತು. ಆದರೆ ಹೆಂಗಸರಾಗಿರಬಹುದು, ಗಂಡಸಾಗಿರಬಹುದು ಕುಂತು ಉಣ್ಣುವ ಜಾಯಮಾನದವರು ಈ ಸಮುದಾಯದಲ್ಲಿ ತುಂಬ ವಿರಳ. ಹೆಂಗಸರು ಊರೂರಿಗೆ ಬಾಚಣಿಗೆ, ಮಣಿಸರ, ಸ್ನೋ, ಪೌಡರ್, ಬಳೆ, ದಾರ, ಸೂಜಿ, ದಬ್ಬಳ, ಪೆನ್ನು, ಟೇಪು ಇವೆ ಮೊದಲಾದ ವೃತ್ತಿಯಲ್ಲಿ ತೊಡಗಿ ಊರೂರು ಸುತ್ತಿ ವ್ಯಾಪಾರ ಮಾಡಿ ಹೊಟ್ಟೆಹೊರೆದಿದ್ದಾರೆ. ಹೆಂಗಸರದು ಈ ರೀತಿಯ ಕಸುಬಾದರೆ, ಗಂಡರು ಕೂಡ ತಮ್ಮ ದೈನಂದಿನ ಕಸುಬಿನಲ್ಲಿ ತೊಡಗಿರುವುದಕ್ಕೆ ನಿದರ್ಶನವಾಗಿ ಇವರುಗಳು ಕೋಲೆ ಬಸವನ ಆಡಿಸುವುದು, ಛತ್ರಿ ರಿಪೇರಿ ಮಾಡುವುದು, ತಬಲ, ಪಿಟೀಲು, ಹಾರ್ಮೋನಿಯಂ, ಹಳೆಯ ಬೀಗ-ಬೀಗದ ಕೈ , ಬಟ್ಟೆ ವ್ಯಾಪಾರ ಇವೆ ಮುಂತಾದ ಸಣ್ಣಪುಟ್ಟ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕು ಕಳೆಯುತ್ತಾರೆ. ಸುಗ್ಗಿಯ ಸಮಯದಲ್ಲಿ ಊರಿಂದ ಊರಿಗೆ ನಾಟಕಗಳನ್ನು ಆಡುತ್ತ, ಆಡಿಸುತ್ತಾ, ದವಸ ಧಾನ್ಯಗಳನ್ನು ಸಂಪಾದಿಸುವ ಸಲುವಾಗಿ, ಹೆಂಗಸರನ್ನು ತಮ್ಮೊಟ್ಟಿಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಅನಿವಾರ್ಯ ಸಂದರ್ಭದಲ್ಲಿ ಹೆಂಗಸರು ಮತ್ತು ಮಕ್ಕಳನ್ನು ಮಾತ್ರ ತಮ್ಮೊಡನೆ ಕರೆದುಕೊಂಡು ಹೋಗುತ್ತಾರೆ. ಹೀಗಾಗಿ ಇವರು ಅಗತ್ಯಕ್ಕನುಸಾರ ಮತ್ತು ಪರಿಸ್ಥಿತಿಗನುಸಾರವಾಗಿ ಹೊಂದಿಕೊಂಡು ಬದುಕು ನಿಭಾಯಿಸುವ ಕಲೆಗಾರಿಕೆ ಇವರದಾಗಿದೆ. ಅದರಲ್ಲಿಯೂ ಗಂಡಸರಂತೂ ಊರಿನಲ್ಲಿ ಇರುವುದು ತುಂಬಾ ಅಪರೂಪ.

ದೊಂಬಿದಾಸ ಜನಾಂಗದ ಹುಡುಗರು ಏಕತಾರಿಯನ್ನು ಬಲಗೈಲಿ ಹಿಡಿದು, ಚಿಟಿಗೆಯನ್ನು ಎಡಗೈಲಿ ಹಿಡಿದು ನುಡಿಸುತ್ತಿದ್ದರೆ : ಇಬ್ಬರು ಉಡದ ಚರ್ಮದಿಂದ ಹದವಾಗಿ ಮಾಡಿದ್ದ ದಮ್ಮಡಿಯನ್ನು ಮತ್ತೊಬ್ಬ ಕಂಚಿನ ಬಟ್ಟು ತಾಳಗಳನ್ನು ಕುಟುತ್ತ ಸೊಲ್ಲು ಕೊಡುತ್ತಾರೆ. ಗಂಗೇಗೌರಿ ಜಗಳ, ಹುಟ್ಟದಳೆ ಗೌರಮ್ಮ, ಕೃಷ್ಣಕೊರವಂಜಿ, ಬಂಜೆಹೊನ್ನಮ್ಮ, ಬಾಲನಾಗಮ್ಮ, ಅತ್ತೆ-ಮಾವ, ಅಣ್ಣ-ತಂಗಿ ಇನ್ನೂ ಮುಂತಾದ ಕಾವ್ಯಗಳನ್ನು ಹಾಡಿ ರಂಜಿಸುತ್ತಾರೆ. ಅಷ್ಟೇ ಅಲ್ಲದೆ ರಾಮಾರಣ, ಮಹಾಭಾರತ, ಪುರಾಣ ಪುಣ್ಯಕಥೆಗಳು, ಐತಿಹಾಸಿಕ, ಪೌರಾಣಿಕ, ಜನಪದ ಮಹಾಕಾವ್ಯ ಮೊದಲಾದವನ್ನು ಹಾಡುತ್ತಲೆ, ಜನರ ಹೃದಯಕ್ಕೆ ಮುದ ನೀಡುತ್ತಾರೆ. ಜೊತೆಗೆ ರಾಜಾ ಸತ್ಯವ್ರತ, ರಾಜಾ ವಿಕ್ರಮ, ಶ್ರೀಕೃಷ್ಣಪಾರಿಜಾತ, ಶ್ರೀಕೃಷ್ಣಲೀಲೆ, ಸತ್ಯಹರಿಶ್ಚಂದ್ರ, ಭಕ್ತಪ್ರಹ್ಲಾದ, ಪ್ರೇಮ ಸತ್ಯಭೋಜ, ನಳಚರಿತ್ರೆ, ಮಾರ್ಕಂಡೇಯ ನಾಟಕಗಳಲ್ಲಿ ಅಭಿನಯಿಸಿ ಜನರಿಗೆ ಮನರಂಜನೆ ನೀಡುತ್ತಾರೆ. ವೃತ್ತಿಗಾಯಕರು, ನಾಟಕಕಾರರು, ಹರಿಕತೆ ಮಾಡುವುದರಲ್ಲಿಯೂ ಸಹ ಇವರು ಜನ ಮೆಚ್ಚುಗೆ ಪಡೆದಿದ್ದಾರೆ.

ದೊಂಬಿದಾಸ ಸಮುದಾಯವು ತಮ್ಮ ನಿತ್ಯ ಬದುಕಿನಲ್ಲಿ ಮಾಮೂಲಿನ ಕಸುಬು ಮಾತ್ರ ಮಾಡುವುದಿಲ್ಲ. ಇದರ ಜೊತೆಗೆ ಉಪ ಕಸುಬನ್ನು ಮೈಗೂಡಿಸಿಕೊಂಡು ತಮ್ಮ ಕೌಶಲ್ಯ ಪ್ರದರ್ಶನವನ್ನು ತೋರಿಸಿದ್ದಾರೆ. ಬೇಟೆ ಆಡುವುದು, ಹಂದಿಗಳನ್ನು ಹಿಡಿಯುವುದು, ಗವುಜಗನ ಹಕ್ಕಿ ಹಿಡಿಯುವುದು, ಇವರಿಗೆ ತುಂಬಾ ಪ್ರಿಯವಾದ ಹಂದಿಗಳನ್ನು ಬೇಟೆಯಾಡುವ ಸಂದರ್ಭದಲ್ಲಿ, ಸಹಾಯ ಮಾಡಲು ನಾಯಿಗಳನ್ನು ಸಾಕುತ್ತಾರೆ. ಈ ಉಪಕಸುಬಿನ ಜೊತೆಗೆ, ದೊಂಬಿದಾಸರ ಹೆಂಗಸರು ಕುರಿ ಸಾಕಾಣಿಕೆ, ಎಲೆಕಟ್ಟುವುದು, ಮೊದಲಾದ ಕೆಲಸದಲ್ಲಿ ತೊಡಗುವ ಮೂಲಕ ಜೀವನ ಕಳೆಯುತ್ತಾರೆ.

'ದೊಂಬಿದಾಸರು' ಎಂದು ತಮ್ಮ ಸಮುದಾಯವನ್ನು ಸಾರ್ವಜನಿಕವಾಗಿ ಗುರ್ತಿಸಿಕೊಳ್ಳಲು ಇವರು ಹಿಂಜರಿಯುತ್ತಾರೆ. ಬದಲಾಗಿ ತೆಲಗು ಜಂಗಮರು ಅಥವಾ ತೆಲಗು ಬಣಜಿಗ ಎಂದು ತಾವು ಗುರ್ತಿಸಿಕೊಳ್ಳುವ ಮೂಲಕ, ಬದುಕುತ್ತಿರುವ ಇವರು, ತಮ್ಮ ಆರಾಧ್ಯದೈವ ವೈಷ್ಣವ ಭಕ್ತಸಮುದಾಯಕ್ಕೆ ಸೇರಿರುವ ವ್ಯಕ್ತಿಗಳ ಉಪಯೋಗಕ್ಕಾಗಿ ದೇವಾರಾಧನೆ ಮಾಡುತ್ತಾರೆ ಮತ್ತು ನರ್ತಿಸುತ್ತಾರೆ. ಕುಟುಂಬದ ಹಿರಿಯ ಮಗ ಈ ವೃತ್ತಿಯನ್ನು ಮಾಡುತ್ತಾನೆ. ಶನಿವಾರ ಇವರಿಗೆ ಶುಭದಿನ. ಸೋಮವಾರ ಇತರೆ ಜನಾಂಗದವರ ಹಾಗೆ ಎತ್ತುಗಳನ್ನು ಹೊಲವನ್ನು ಉಳುಮೆ ಮಾಡಲು ಕಟ್ಟುವುದಿಲ್ಲ. ಮುಂಗಾರು ಮಳೆ ಹೊಯ್ದ ನಂತರ ಹೊನ್ನಾರು ಇವರು ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಮನೆಯಲ್ಲಿ ಏನಾದರೊಂದು ಮಂಗಳಕಾರ್ಯ ನಡೆಯಬೇಕು ಎಂಬ ನಂಬಿಕೆಯಿಂದ ಹೊಸ ಮನೆ ಕಟ್ಟುವುದು. ಹೊಸ ಬಾವಿ ತೋಡಿಸಿದರಂತೂ, ಅಲ್ಲಿಂದ ಮೊದಲು ನೀರು ತಂದು ಗಂಗೆಯನ್ನು ಪೂಜಿಸುತ್ತಾರೆ. ಕೃಷಿಯಲ್ಲಿ ಬೆಳೆಗಳ ಬೀಜವನ್ನು ಬಿತ್ತುವುದಂತೂ ಕೆಲವು ಮಳೆ, ನಕ್ಷತ್ರಗಳ ಆಧಾರದ ಮೇಲೆಯೆ, ನಿದರ್ಶನವಾಗಿ ಹೇಳುವುದಾದರೆ ಜಮೀನಿನಲ್ಲಿ ಹರಳನ್ನು ರೋಹಿಣಿಯಲ್ಲಿ, ರಾಗಿಯನ್ನು ಮುಖ ಮಳೆಯಲ್ಲಿಯೂ ಮತ್ತು ಭತ್ತವನ್ನು ಆದ್ರಾ್ರ ಮಳೆಯಲ್ಲಿಯು ಬಿತ್ತುವುದು ಇವರಿಗೆ ರೂಢಿಯಾಗಿದೆ. ಕಸುಬು ನಿರ್ವಹಿಸುವಾಗ, ಧರ್ಮ ದೇವತೆಗಳ ಬಗ್ಗೆ ವಿಶೇಷ ನಂಬಿಕೆಯನ್ನಿಟ್ಟುಕೊಂಡು ಕಾಲಕಳೆಯುತ್ತಲೇ, ವಿವಿಧ ವೃತ್ತಿಯನ್ನು ನಂಬಿ ಬದುಕುತ್ತಿರುವುದು ನಿಜಕ್ಕೂ ಸಂತೋಷವಾದ ಸಂಗತಿ ಎನ್ನಬಹುದು.

**ಊಟ ಉಪಚಾರ**

ದೊಂಬಿದಾಸ ಇತರೆ ಶೂದ್ರವರ್ಗದವರಂತೆಯೆ, ಮಾಂಸಾಹಾರಿಗಳು, ಅಂತೆಯೆ ಸಸ್ಯಹಾರಿಗಳು ಹೌದು.ಇವರು ಹಸು, ಇಲಿ, ಮೊಸಳೆ ಮತ್ತು ನವಿಲು ಮಾಂಸವನ್ನು ತಿನ್ನುವುದಿಲ್ಲ. ಆದರೆ ಹೆಂಡ, ಸಾರಾಯಿಗಳನ್ನು ಕೆಲವು ಜನರು ಮಾತ್ರ ಕುಡಿಯುತ್ತಾರೆ. ಇವರಿಗಿಂತ ಮೇಲ್ವರ್ಗದವರಾದ ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಮೊದಲಾದವರ ಮನೆಗಳಲ್ಲಿ ಹಬ್ಬ ಹರಿದಿನಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಊಟಮಾಡುತ್ತಾರೆ. ಇವರು ಭಿಕ್ಷೆ ಬೇಡಿ ತಂದ ವಿವಿಧ ಬಗೆಯ ಕಾಳು ಕಡ್ಡಿಗಳಿಂದ ಅಡುಗೆ ಮಾಡಿಕೊಳ್ಳುತ್ತಾರೆ. ಕೆಲವು ಸಲ ರೊಟ್ಟಿ, ಅನ್ನವನ್ನು ಬೇಡಿ ತರುವುದು ಕೂಡ ಉಂಟು. ಇವರು ಕುರಿ, ಕೋಳಿ, ಮೀನು, ಕೌಜುಗ, ಅಡವಿಕೋಳಿ ಇನ್ನು ಮುಂತಾದ ಪ್ರಾಣಿಪಕ್ಷಗಳ ಮಾಂಸವನ್ನು ತಿನ್ನುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಶೂದ್ರವರ್ಗದವರು ಬಳಸುವ ಆಹಾರ ಪದ್ಧತಿಯಂತೆಯೇ ಇವರ ಊಟ ಉಪಚಾರ ವಿಧಾನವಿದೆ ಎನ್ನಬಹುದು.

**ಉಡುಗೆ**

ದೊಂಬಿದಾಸ ಸಮುದಾಯದವರು ಬಟ್ಟೆ ಧರಿಸುವುದು ಇತರ ಹಿಂದೂ, ಜಾತಿಯವರ ಹಾಗೆಯೆ. ಗಂಡಸರು ಸಂದರ್ಭದಲ್ಲಿ ಮಾತ್ರ ತಲೆಗೆ ಬಣ್ಣದ ರುಮಾಲು, ನಿಲುವಂಗಿ, ಮೇಲೊಂದು ಕೋಟು ಮತ್ತು ದೋತ್ರ ತೊಟ್ಟ ಹೆಗಲ ಮೇಲೆ ಶಾಲು ಹೊದ್ದು ಜೋಳಿಗೆ ನೇತುಹಾಕಿಕೊಂಡು, ಬಲಗೈಯಲ್ಲಿ ಏಕತಾರಿ, ಎಡಗೈಯಲ್ಲಿ ಚಿಟಕಿ ಹಿಡಿದಿರುತ್ತಾರೆ. ಹೆಂಗಸರು ಹಿಂದೂ ಹೆಂಗಸರಂತೆಯೆ ಅಚ್ಚಗೆಂಪು ಕುಂಕುಮ, ಕಾಲುಂಗುರಮ ಗಾಜಿನ ಬಳೆಯನ್ನು ತೊಟ್ಟಿರುತ್ತಾರೆ. ಇದರರ್ಥವೇನೆಂದರೆ ಈ ಹೆಂಗಸರು ವಿವಾಹವಾಗಿರುವವರು ಎಂದರ್ಥ. ದೇಹದ ಮೇಲೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ವಿಶೇಷವಾಗಿ ಕೈ, ಭುಜ, ಹಣೆ, ಗಲ್ಲ ಮತ್ತು ಕೆನ್ನೆ ಮೊದಲಾದ ಭಾಗಗಳಲ್ಲಿ ಹಚ್ಚೆ ಹಾಕಿಸಿಕೊಂಡರೆ ತಮ್ಮ ಸೌಂದರ್ಯ ಹೆಚ್ಚುತ್ತದೆ ಎನ್ನುವಂತಹದ್ದು ಕೆಲವರ ಅಭಿಪ್ರಾಯ ಶಂಖದ ತಟ್ಟೆ, ತುಳಸಿ, ಅರಳಿದ ಹೂವು, ರಥ, ಬಾಳೆಮರದ ಹಚ್ಚೆಯನ್ನು ಇವರು ಹಾಕಿಸಿಕೊಳ್ಳುತ್ತಾರೆ. ಹೆಂಗಸರು ಸೀರೆ ಉಟ್ಟು ಬಲಕ್ಕೆ ಸೆರಗು ಹಾಕಿಕೊಳ್ಳುತ್ತಾರೆ. ಗಂಡಸರು ಹಾರೋಗಚ್ಚೆ ಹಾಕಿ ಮೇಲೆ ನಿಲುವಂಗಿ ಧರಿಸುತ್ತಾರೆ. ದೇವರ ಹೆಸರಿನಲ್ಲಿ ಶಂಖ ಚಕ್ರಕಾರದ ಹಚ್ಚೆಯನ್ನು ವಿಶೇಷವಾಗಿ ಗಂಡಸರು ಹಾಕಿಸಿಕೊಳ್ಳುವ ಮೂಲಕ ತಮ್ಮ ಸೌಂದರ್ಯ ಪ್ರಿಯತೆಯನ್ನು ಹೆಚ್ಚು ಇಷ್ಟಪಡುತ್ತಾರೆ. ತಮ್ಮ ಉಡುಪು ವಸ್ತ್ರಾಲಂಕಾರವನ್ನು ಮಾಡಿಕೊಳ್ಳುತ್ತಾರೆ.

**ತೊಡುಗೆ (ಆಭರಣ)**

ವಿಶೇಷವಾಗಿ ಮಹಿಳೆಯರು ಆಭರಣಗಳನ್ನು ತೊಡುತ್ತಾರೆ. ಮೂಕು-ಘಟಿಕಾ (ಮೂಗುಬಟ್ಟು) ನಲ್ಲಾಜಲು (ಕರೀಬಳಿ), ಕಮುಲು (ಓಲೆ), ಕಾಲಂದ್ಲುಲು (ಕಾಲಂದಿಗೆ), ಸುಮರ್-ಕುಪ್ಪ(ಕುಪ್ಪೆ), ಸಿಮ್ಮುನಮುರಾಲು (ಸಿಂಹನ ಮುರಾವು) ಎಂಬ ಕಿವಿಯಾರಭರಣ, ಕಡಗಾವಲು, ಒಡ್ಯಾಣಮು ಕಾಲುಂಗ್ರಾಲು ಇತ್ಯಾದಿಯನ್ನು ಬಳಸುತ್ತಾರೆ. ಹೆಂಗಸರು ಹಲ್ಲಿಗೆ ಕರುಕಾಯ್ಪುಡಿ ಹಾಕಿಕೊಂಡು, ಹಲ್ಲುಗಳನ್ನು ಕಪ್ಪು ಮಾಡಿಕೊಳ್ಳುತ್ತಾರೆ. ಹಣೆ, ಮುಂಗೈ, ರಟ್ಟೆಗಳಿಗೆ ಹಚ್ಚೆ ಹಾಕಿಸಿಕೊಂಡು ತಮ್ಮ ಮೈಸೌಂದರ್ಯವನ್ನು ಹೆಚ್ಚಿಸಿಕೊಳ್ಳುತ್ತಲೆ ತಮ್ಮ ಸೌಂದರ್ಯ ಕಲಾವಂತಿಕೆಯನ್ನು ಮೆರೆಯುತ್ತಾರೆ.

## ಹಬ್ಬಹರಿದಿನಗಳು

ದೊಂಬಿದಾಸ ಜನಾಂಗವು ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ತಿರುಪತಿ ವೆಂಕಟೇಶ್ವರ ಇವರ ಕುಲದೇವರು ಜೊತೆಗೆ ಅಂಜನೇಯ, ಈಶ್ವರ, ಕೆಂಚರಾಯ ಮೊದಲಾದ ಗರುಡ ದೇವರುಗಳನ್ನು ಆರಾಧಿಸುತ್ತಾರೆ. ಕುಂದೂರಮ್ಮ, ಮಳೆಯಮ್ಮ, ಯೆಲ್ಲಮ್ಮ, ಕಬ್ಬಾಳಮ್ಮ, ಮಾರಮ್ಮ, ಹುಲಿಯಮ್ಮ ಮೊದಲಾದ ಗ್ರಾಮದೇವತೆಗಳನ್ನು ಪೂಜಿಸುವ ಮೂಲಕ, ತಮ್ಮ ನಿಜವಾದ ಭಕ್ತಿ ಸ್ವರೂಪವನ್ನು ತೋರಿಸುತ್ತಾರೆ. ಹೆಣ್ಣು ದೇವತೆಗಳಿಗೆ ಪ್ರಾಣಿಯನ್ನು ಬಲಿಕೊಡುವ ಪದ್ಧತಿ ಈ ಸಮುದಾಯದಲ್ಲಿದೆ. ಇವರು ವಿಶೇಷವಾಗಿ ಆಚರಿಸುವುದು, ಪಿತೃಪಕ್ಷ ಹಬ್ಬವನ್ನು. ಸತ್ತ ಹಿರಿಯರಿಗೆ ಅನ್ನ ಹಾಕುವುದೇ ಈ ಹಬ್ಬದ ವಿಶೇಷವಾಗಿರುತ್ತದೆ. ಆ ಮೂಲಕ ಎಡೆ (ಅನ್ನ) ಹಾಕಿ, ಹಿರಿಯರಿಗೆ ಸದ್ಗತಿ ದೊರೆಯಲಿ ಎಂಬ ಪ್ರಾರ್ಥನೆಯನ್ನು ಮಾಡುತ್ತದೆ. ಈ ಹಬ್ಬ ಮಾತ್ರ ಅವರಿಗೆ ತುಂಬ ವಿಶೇಷ. ಇತರ ಹಿಂದೂಗಳಂತೆಯೆ ಇವರು ಕೂಡ ದೀಪಾವಳಿ, ಯುಗಾದಿ, ಮಕರಸಂಕ್ರಾಂತಿ, ಈ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಮೂಲಕ ಯಾವುದೇ ಆಚರಣೆಯಾಗಲಿ ಅವನ್ನು ಅತಿ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡುತ್ತಾರೆಂಬುದು ಇಲ್ಲಿ ಮುಖ್ಯವಾದ ಅಂಶವಾಗಿದೆ.

## ವಿವಾಹ – ವಿಚ್ಛೇದನ – ದಾಂಪತ್ಯ

ದೊಂಬಿದಾಸ ಜನಾಂಗದಲ್ಲಿ ವಿವಾಹ ಪದ್ಧತಿ ಸಾಮಾನ್ಯವಾಗಿ ಹಿಂದೂ ಸಂಪ್ರದಾಯದಂತೆಯೇ ನಡೆಯುತ್ತದೆ. ವೀಳ್ಯ ಬದಲಾಯಿಸಿಕೊಳ್ಳುವ ಮೂಲಕ ಮದುವೆ ಮುಹೂರ್ತ ಆರಂಭವಾಗುತ್ತದೆ. ಇದನ್ನು "ವಕ್ಕಾಕುಶಾಸ್ತ್ರ ಅಥವಾ ವಕ್ಕಲುಶಾಸ್ತ್ರ" ಎಂದು ಕರೆಯುತ್ತಾರೆ. ಇದು ಮದುವೆಯ ನಿಶ್ಚಿತಾರ್ಥ, ಕುಲಪುರೋಹಿತ ಮತ್ತು ಕುಲಸ್ಥರು ಸೇರಿ ನಡೆಸುವ ಶಾಸ್ತ್ರವಾಗಿರುತ್ತದೆ. ಅಲ್ಲದೆ, ಮದುವಣಗಿತ್ತಿಯ ಉಡುಗೆಯ ಮಡಿಲಿನಲ್ಲಿ ಕೆಲವು ಶುಭವಸ್ತುಗಳನ್ನಿಡುವುದರ ಮೂಲಕ ಈ ಕಾರ್ಯ ನಡೆಯುತ್ತದೆ. ಮದುವೆಯ ಸಂದರ್ಭದಲ್ಲಿ ಇವರು ಬ್ರಾಹ್ಮಣ ಪುರೋಹಿತರನ್ನು ಕರೆಸುವುದಿಲ್ಲ. ವಧುವಿನ ಮನೆಯಲ್ಲಿಯೇ ಮದುವೆ ನಡೆಯುತ್ತದೆ. ಮದುವೆಯ ದಿವಸ ಹಸಿರು ಚಪ್ಪರ ಹಾಕಿ, ಹಾಲು ಕಂಬ ನೆಟ್ಟಿರುತ್ತಾರೆ. ಸಾಮಾನ್ಯವಾಗಿ, ಗಂಡನ್ನು, ಹೆಣ್ಣಿನ ಮನೆಗೆ ಕರೆದುಕೊಂಡು ಬಂದ ದಿವಸ ಚಪ್ಪರದ ದಿನವಾಗಿರುತ್ತದೆ. ಅಂದು ಹೆಣ್ಣು ಗಂಡುಗಳನ್ನು ಹಸೆಮಣೆ ಮೇಲೆ ಕೂರಿಸಿ ಮುತ್ತೈದೆಯೊಬ್ಬಳು ಎರಡು ಒನಕೆಗಳನ್ನು ಪೂಜಿಸಿ, ಅವನ್ನು ಎರಡು ಕೈಗಳಲ್ಲೂ ಕತ್ತರಿಯ ಆಕಾರಕ್ಕೆ ಜೋಡಿಸಿ ಹಿಡಿದುಕೊಂಡು ಎಡಗೈ ಒನಕೆಯನ್ನು ಹೆಣ್ಣಿನ ಭುಜಕ್ಕೂ ಬಲಗೈ ಒನಕೆಯನ್ನು ಗಂಡಿನ ಭುಜಕ್ಕೂ ತಾಕಿಸುತ್ತ ಮೂರು ಸಲ ಅದಲು ಬದಲು ಮಾಡುತ್ತಾಳೆ. ಅನಂತರ ಹೆಣ್ಣು ಗಂಡುಗಳ ಮುಂದೆ ಒರಳು ಕಲ್ಲನ್ನು ಮಡಗಿ ಮೂರು ಜನ ಮುತ್ತೈದೆಯರು ಭತ್ತ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ಈಗ ಹೆಣ್ಣು ಗಂಡುಗಳು ಒಂದೊಂದು ಒನಕೆಯನ್ನು ಹಿಡಿದು ಮೂರು ಸಲ ಕುಟ್ಟಿದ ಮೇಲೆ ಮುತ್ತೈದೆಯರು ಶಾಸ್ತ್ರದ ಭತ್ತ ಕುಟ್ಟುತ್ತಾರೆ. ಅನಂತರ ಮಣ್ಣುಂಡೆ ಶಾಸ್ತ್ರ. ಪೂಜಿಸಿರುವ ಕೆಮ್ಮಣ್ಣಿನ ಉಂಡೆಗಳನ್ನು ಚಪ್ಪರದ ಪ್ರತಿ ಕಂಬಕ್ಕೂ ಒಂದೊಂದರಂತೆ ಇಡುತ್ತಾರೆ. ಇದಿಷ್ಟು ಮೊದಲಶಾಸ್ತ್ರ. ಎರಡನೆಯ ದಿನ ಧಾರೆ, ವೀಳ್ಯದೆಲೆ ಮೇಲೆ ಗಂಡಿನ ಕೈಗೆ ಕಾಯಿ, ಹೆಣ್ಣಿನ ಕೈಗೆ ಬಾಳೆಹಣ್ಣಿನ ಚಿಪ್ಪು ಇರಿಸಿ ಹಾಲು ಬಿಡುತ್ತಾರೆ. ಜನಾಂಗದ ಅಥವಾ ಕುಲದ ಮುಖ್ಯಸ್ಥ ಒಬ್ಬನಿರುತ್ತಾನೆ. ಈತನನ್ನು 'ಪಿನ್ನಪೆದ್ದ' ಎಂದು ಕರೆಯುತ್ತಾರೆ. ಇವನು ವಧು ವರರ ಕಾಲ್ಬೆರಳಿಗೆ ಉಂಗುರ ತೊಡಿಸುತ್ತಾನೆ. ಜೊತೆಗೆ ಅರಿಶಿನ ಕುಂಕುಮ, ಅಕ್ಷತೆ, ವೀಳ್ಯದೆಲೆ, ಅಡಕೆ, ತಾಳಿ ಮುಂತಾದ ವಸ್ತುಗಳನ್ನು ತಟ್ಟೆಯೊಂದರಲ್ಲಿಟ್ಟು ಹಿರಿಯರ ಕೈಯ್ಯಲ್ಲೆಲ್ಲ ನಮಸ್ಕಾರ ಮಾಡಿಸಿ ಗಂಡಿನ ಕೈಗೆ ತಂದು ಕೊಡುತ್ತಾನೆ. ಗಂಡು ಮತ್ತು ಹೆಣ್ಣನ್ನು ಎದುರು ಮುಖಮಾಡಿ ನಿಲ್ಲಿಸಿ,

ಜೊತೆಗೆ ಗಂಡು ಹೆಣ್ಣುಗಳಿಬ್ಬರು ಕೂಡ ಒಬ್ಬರನ್ನೊಬ್ಬರನ್ನು ನೋಡಿದುದಕ್ಕಾಗಿ ಅವರಿಬ್ಬರ ಉತ್ತರ ಪಡೆಯುತ್ತಾನೆ. ನಂತರ ಗಂಡು ತಾಳಿಯನ್ನು ಮೂರು ಗಂಟುಹಾಕಿ ಕಟ್ಟುವ ಮೂಲಕ ಗಂಡು-ಹೆಣ್ಣುಗಳಿಬ್ಬರು ದಂಪತಿಗಳಾಗಿ ಹೊಸಬಾಳಿಗೆ ಪಾದಾರ್ಪಣೆ ಮಾಡುತ್ತಾರೆ.

### ಕೂಡಾವಳಿ (ಕಟ್ಟೆಂಪು) ಮತ್ತು ವಿಚ್ಛೇದನ

ಈ ಸಮುದಾಯದಲ್ಲಿ ಗಂಡಸಿಗೆ ಮೊದಲ ಹೆಂಡತಿ ತೀರಿಕೊಂಡರೆ, ಎರಡನೇ ಮದುವೆ ಆಗಬಹುದು ಅಥವಾ ಈ ಮದುವೆಯು ಕೂಡ ಶಾಸ್ತ್ರಬದ್ಧವಾಗಿಯೆ ನಡೆಯಬಹುದು. ಇಲ್ಲದಿದ್ದರೆ ಕಟ್ಟೆಂಪು (ಕೂಡಾವಳಿ) ಆಗಬಹುದು. ಅಂದರೆ ಎರಡನೆಯ ಹೆಂಡತಿ ವಿಧವೆ ಅಥವಾ ಹಿಂದಿನ ಗಂಡನನ್ನು ಬಿಟ್ಟವಳು ಆಗಿರುತ್ತಾಳೆ. ಗಂಡನನ್ನು ಬಿಟ್ಟವಳಾದಾಗ ಎರಡನೇ ಗಂಡ ಅವಳ ಹಿಂದಿನ ಗಂಡನಿಗೆ ನಷ್ಟವನ್ನು ತುಂಬಿಕೊಡಬೇಕಾದ ನಿರ್ಬಂಧವು ಈ ಸಮುದಾಯದಲ್ಲಿದೆ.

### ವಿಚ್ಛೇದನ ಪದ್ಧತಿ

ಸಾಮಾನ್ಯವಾಗಿ ಗಂಡ-ಹೆಂಡತಿಯರಲ್ಲಿ ಮನಸ್ತಾಪ ಎದುರಾದಾಗ ಪತ್ನಿಯ ದುರ್ನಡತೆಗಾಗಿ ಪತಿಯು ಆಕೆಯ ತಾಳಿಯನ್ನು ಕಿತ್ತುಕೊಂಡು ಕುಲಸ್ಥನಿಗೆ ಎರಡು ರೂಪಾಯಿ ದಂಡವನ್ನು ನೀಡಿದ ನಂತರ ವಿಚ್ಛೇದನ ಪಡೆಯಬಹುದು. ಇಷ್ಟಪಟ್ಟರೆ ಇವಳು ಮತ್ತೆ ಪುನರ್ ವಿವಾಹವಾಗುವ ಅವಕಾಶವಿದೆ. ಇವಳನ್ನು ಶಾಸ್ತ್ರದಡಿ ಮದುವೆ ಆಗುವ ವ್ಯಕ್ತಿಯು ಹಿಂದಿನ ಗಂಡನ ಖರ್ಚನ್ನು ತುಂಬಬೇಕಾಗುತ್ತದೆ.

### ದಾಂಪತ್ಯ-ಹೆಣ್ಣಿನ ಸ್ಥಾನಮಾನ

ದೊಂಬಿದಾಸ ಜನಾಂಗದಲ್ಲಿ ವಿಧವಾ ವಿವಾಹ ಪದ್ಧತಿ ರೂಢಿಯಲ್ಲಿದೆ. ವಿಧವೆಯು ತನ್ನ ಪತಿಯ ಸೋದರನನ್ನು ಬಿಟ್ಟು ಯಾರನ್ನಾದರೂ ವಿವಾಹವಾಗಬಹುದು. ಕೂಡಿಕೆಯಡಿ ವಿಧವೆಯು ಮತ್ತೆ ವಿವಾಹವಾಗಲು ಅವಕಾಶವಿದೆ. ಬುದ್ದ ತಾಳಿ ಎಂದು ಕರೆಯುವ ತಾಳಿಯನ್ನು ಇವಳ ಕುತ್ತಿಗೆಗೆ ಕಟ್ಟಲಾಗುತ್ತದೆ. ಪುನರ್ ವಿವಾಹದ ನಂತರ ಈಕೆಯು ತನ್ನ ಸತ್ತ ಪತಿಯ ಆಸ್ತಿಯ ಮೇಲೆ ಯಾವುದೇ ಹಕ್ಕನ್ನು ಹೊಂದುವ ಹಾಗಿಲ್ಲ.

ಹೆಣ್ಣು ಮೊದಲು ಬಸುರಿಯಾದಾಗ ಹೆರಿಗೆ ಸಮಯದಲ್ಲಿ ತಡೆಕಾಯಿ ಎಂಬ ಹೆಸರಿನಿಂದ ಒಂದು ತೆಂಗಿನಕಾಯನ್ನು ನಿವಾಳಿಸಿ ಒಡೆಯುತ್ತಾರೆ. ಮಗು ಹುಟ್ಟಿದ ಕೂಡಲೆ ಸೂಜಿಯನ್ನು ಕಾಯಿಸಿ ಪಕ್ಕೆ, ಹಣೆ, ಮುಂಗೈ, ಮುಂಗಾಲುಗಳಿಗೆ ಚಿಟಿಕೆ ಹಾಕುತ್ತಾರೆ. ಹನ್ನೆರಡನೆಯ ದಿನದಲ್ಲಿ ನಾಮಕರಣ ಮಾಡುತ್ತಾರೆ. ಅಂದು ದಾಸಪ್ಪನನ್ನು ಕರೆಸಿ ಶಂಖ, ಜಾಗಟೆ ಊದಿಸಿ ಮೀಸಲು ತೆಗೆಸಿ ವೆಂಕಟರಮಣ ಸ್ವಾಮಿ ಪೂಜೆ ಮಾಡಿ, ಮಾಡಿದ ಅಡುಗೆಯನ್ನೆಲ್ಲ ಎಡೆ ಮಾಡಿಸುತ್ತಾರೆ. ದಾಸಪ್ಪ ನಿರ್ಧರಿಸಿದ ಹೆಸರನ್ನು ಗಟ್ಟಿಯಾಗಿ ಹೇಳಿ ಶಂಖವನ್ನು ಊದಿ ಜಾಗಟೆ ಬಾರಿಸುತ್ತಾನೆ. ತಿಂಗಳವರೆಗೆ ತಣ್ಣೀರನ್ನು ಮುಟ್ಟದೇ ಇದ್ದ ಬಾಣಂತಿ ಅನುಕೂಲ ದಿನದಲ್ಲಿ ಗಂಟೆ ಪೂಜೆ ಮಾಡಿ ದಿನನಿತ್ಯದ ಕೆಲಸವನ್ನು ಆರಂಭಿಸುತ್ತಾಳೆ. ಗರ್ಭಿಣಿ ಮಹಿಳೆಗೆ ಯಾವುದೇ ವಿಶೇಷ ಆಚರಣೆಯನ್ನು ವಿಶೇಷವಾಗಿ ಮಾಡುವುದಿಲ್ಲವಾದರೂ, ಈಕೆಯ ಸುಖ-ಪ್ರಸವಕ್ಕಾಗಿ ಆಕೆಯ ಗಂಡನು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತಾನೆ. ಗರ್ಭಾವಸ್ಥೆಯ ಅವಧಿಯಲ್ಲಿ ಪತಿಯು ಯಾವುದೇ ಪ್ರಾಣಿಯನ್ನು ಕೊಲ್ಲುವುದು, ಕತ್ತರಿಸುವುದು ಮತ್ತು ಸತ್ತವರನ್ನು

ಹೊರುವ ಪದ್ಧತಿ ಇರುವುದಿಲ್ಲ. ಸುಲಭ ಹೆರಿಗೆಯನ್ನು ನಡೆಸಿಕೊಡಲು ಗರ್ಭಿಣಿಯ ಅನೇಕ ಇಷ್ಟ ಆಸೆಗಳನ್ನು ಈಡೇರಿಸುವುದು ಫಲಕಾರಿಯಾದ ವಿಷಯವೇ ಆಗಿದೆ. ತಾಯಿತನವನ್ನು ಕಟ್ಟಿಕೊಳ್ಳುವುದು ಒಂದು ನಿಗದಿತ ಸ್ಥಳದಲ್ಲಿ ಅಂಟಿಕೊಂಡ ಕಲ್ಲನ್ನು ತಳ್ಳುವುದು, ಕಪ್ಪುಪೌಡರ್ನಿಂದ ಗನ್ಫೈರ್ ಮಾಡುವುದು ಸಾಲಾಗಿ ನಿಂತ ಮಹಿಳೆಯರು ಎರಡು ಅಥವಾ ಮೂರು ಮಡಿಕೆಯ ನೀರನ್ನು ಗರ್ಭಿಣಿಯ ತಲೆಯ ಮೇಲೆ ಸುರಿಯಬೇಕಾಗುತ್ತದೆ. ಸಾಮಾನ್ಯವಾಗಿ, ಆ ಕುಟುಂಬದವರಲ್ಲಿ ನಿಧನರಾದ ಪೂರ್ವಿಕರ ಹೆಸರನ್ನು ಅಥವಾ ವೈಷ್ಣವ ದೇವರ ಹೆಸರನ್ನು ಮಗುವಿಗೆ ಇಡುವ ಮೂಲಕ ನಾಮಕರಣ ಸಂಪ್ರದಾಯವನ್ನು ತಮ್ಮ ಸಮುದಾಯದಲ್ಲಿ ರೂಢಿಸಿಕೊಂಡು ಬಂದಿದ್ದಾರೆ. ಗಂಡು ಮಕ್ಕಳಿಗೆ ಹೆಸರಿಡುವಾಗ ಗುರುಮೂರ್ತಿ, ಮಾದೇಶ, ಮುನಿಯ, ತಿರುವೆಂಕಟಮ್, ವರದರಾಜು, ವೀರಭದ್ರ ಇವೆ ಮೊದಲಾದ ಹೆಸರುಗಳನ್ನು ಇಡುತ್ತಾರೆ. ಹೆಣ್ಣುಮಕ್ಕಳಿಗೆ ಹೆಸರಿಡುವಾಗ ಅಮನಾವತಿ, ಬಾಳಿ, ಗಂಗಿ, ಲಿಂಗಮ್ಮ, ರಾಮಕ್ಕ, ವೆಂಕಟಿ ಈ ಹೆಸರುಗಳನ್ನು ಮಕ್ಕಳಿಗೆ ವಿಶೇಷವಾಗಿ ಇಡುತ್ತಾರೆ. ಹೀಗೆ ಹೆಸರಿಡುವ ಸಂಪ್ರದಾಯ ದೊಂಬಿದಾಸರಲ್ಲಿದೆ. ಒಟ್ಟಿನಲ್ಲಿ ದಂಪತಿಗಳು ಅನ್ಯೋನ್ಯವಾಗಿದ್ದರೆ, ಸಂಸಾರ ಸುಖವಾಗಿರುತ್ತದೆ. ಇಲ್ಲವಾದರೆ ವಿಪರೀತ ತೊಂದರೆಯುಂಟಾಗುತ್ತದೆ ಎಂಬ ಲೋಕಾರೂಢಿ ಮಾತಿನ ಮೂಲಕ ಇವರ ಜೀವನವಿದೆ. ಹೆಣ್ಣಿನ ಜೀವನ ಇತರ ಸಮುದಾಯದವರ ಹಾಗೆಯೇ ಕಟ್ಟುನಿಟ್ಟಿನ ಮೂಲಕ ಇದೆ ಎನ್ನಬಹುದಾಗಿದೆ.

**ಋತುಮತಿ ಶಾಸ್ತ್ರ**

ದೊಂಬಿದಾಸ ಈ ಸಮುದಾಯದಲ್ಲಿ ಹೆಣ್ಣು ಋತುಮತಿಯಾದಾಗ ಆಕೆಯನ್ನು ಆಕಳೆ, ಬೇವು, ಮತ್ತಿತರ ಸೊಪ್ಪುಗಳಿಂದ ಹಾಕಲಾದ ಪುಟ್ಟ ಗುಡಿಸಲಿನಲ್ಲಿ ಮೂರರಿಂದ ಐದು ದಿನಗಳವರೆಗೆ ಕೂರಿಸಲಾಗುತ್ತದೆ. ಹಸಿರು ಕಾಳುಗಳನ್ನು ಸೇರಿಸಿ ಬೇಯಿಸಿ ತಯಾರಿಸಿದ ಅನ್ನವನ್ನು ನೀಡುತ್ತಾರೆ. ಹುಡುಗಿಗೆ ಸ್ನಾನ ಮಾಡಿಸಿ ಆರತಿ ಎತ್ತಿ ಗುಡಿಸಲನ್ನು ತೆಗೆದು ಹಾಕಲಾಗುತ್ತದೆ. ಹನ್ನೆರಡನೆಯ ದಿನ ಸೂತಕ ತೆಗೆದು ಹುಡುಗಿಯನ್ನು ಹಸೆ ಮೇಲೆ ಕೂರಿಸಿ ಒಳಕ್ಕೆ ಕರೆದುಕೊಳ್ಳುತ್ತಾರೆ. ಸುಮಾರು ಮೂರು ತಿಂಗಳಿನ ಬಳಿಕವಷ್ಟೇ ಮದುವೆ ಆಗುವುದಕ್ಕೆ ಆಕೆ ಅರ್ಹಳಾಗುತ್ತಾಳೆ.

**ಅಂತ್ಯಸಂಸ್ಕಾರ**

ದೊಂಬಿದಾಸ ಸಮುದಾಯದಲ್ಲಿ ಹೂಳುವ ಮತ್ತು ದಹಿಸುವ ಎರಡು ಪದ್ಧತಿ ಇದೆ. ಮೃತ ದೇಹವನ್ನು ತೊಳೆದು ಹಣೆಯ ಮೇಲೆ ಕುಂಕುಮ ಹಚ್ಚುತ್ತಾರೆ. ಚಟ್ಟದಲ್ಲಿ ದೇಹವನ್ನು ಕುಳಿತ ಸ್ಥಿತಿಯಲ್ಲಿಟ್ಟು ಶವಸಂಸ್ಕಾರದ ಸ್ಥಳಕ್ಕೆ ಹೊತ್ತೊಯ್ಯುತ್ತಾರೆ. ಮೂರು ಅಡಿ ಆಳದ ಗುಂಡಿ ತೆಗೆದು ದೇಹವನ್ನು ಹೂಳಲಾಗುತ್ತದೆ. ಅಂದು ಸತ್ತ ಸ್ಥಳದಲ್ಲಿ ಸಂಜೆ ಕೋಳಿ ಬಲಿಕೊಟ್ಟು ಜೀವತಳಿ ಹಾಕುವ ಪದ್ಧತಿ ಇದೆ. ಸತ್ತ ಮೂರನೆ ದಿನಕ್ಕೆ ಹಾಲು-ತುಪ್ಪದ ಶಾಸ್ತ್ರ ನಡೆಯುತ್ತದೆ. ಹನ್ನೊಂದನೆ ದಿನಕ್ಕೆ ತಿಥಿ ಕಾರ್ಯ ಆರಂಭವಾಗುತ್ತದೆ. ಅಂದು ಎಲ್ಲರಿಗೂ ಮಾಂಸದ ಊಟದ ವ್ಯವಸ್ಥೆ ಮಾಡಲಾಗಿರುತ್ತದೆ. ರಾತ್ರಿಯೆಲ್ಲ ಭಜನೆ ಮಾಡುತ್ತಾರೆ. ಅಂದಿನ ಕಾರ್ಯಕ್ರಮದ ಪೂರ್ಣ ಜವಾಬ್ದಾರಿ ಪಿನ್ನಪೆದ್ದನ (ಕುಲದ ಮುಖ್ಯಸ್ಥ) ದಾಗಿರುತ್ತದೆ. ಹೀಗಾಗಿ ನೂರೊಂದು ಎಲೆ, ನೂರೊಂದು ಅಡಕೆ, ನೂರೊಂದು ಹಣ್ಣು, ನೂರೊಂದು ತೆಂಗಿನಕಾಯಿ, ಕಟ್ಟಿ ಕರ್ಪೂರಗಳಿಂದ ಪೂಜೆ ಮಾಡಿ ಗುದ್ದದ ಮೇಲೆ ಹೊಂಬಾಳೆ ಚುಚ್ಚಿ ಹಾಲುತುಪ್ಪ ಬಿಡುತ್ತಾರೆ. ಅದೆ ಗುದ್ದದ ಮೇಲೆ ಹೆಂಡತಿಯ ಬಳೆ, ಹೂವು, ಕುಂಕುಮಗಳನ್ನು ಕಳೆಯುತ್ತಾರೆ. ಒಟ್ಟಿನಲ್ಲಿ ಹಿಂದೂ ಧರ್ಮದ ಇತರೆ ಜಾತಿಯವರು ಮಾಡುವಂತಹ ಶವಸಂಸ್ಕಾರ

ರೀತಿಯಲ್ಲಿಯೇ ಇವರೂ ಸಹ ಮಾಡುತ್ತಾರೆ. ಹೀಗೆ ದೊಂಬಿದಾಸ ಜನಾಂಗವು ತನ್ನ ಬದುಕಿನ ಸ್ಥಿತಿ ಮತ್ತು ನಂಬಿಕೆಗಳನ್ನು ಮೈಗೂಡಿಸಿಕೊಂಡು ಬಾಳು ಕಳೆಯುತ್ತಿರುವುದನ್ನು ಕಾಣಬಹುದಾಗಿದೆ.

ದೊಂಬಿದಾಸರು ಹೇಳುವ ಕತೆ

ದೊಂಬಿದಾಸರು ಕತೆ ಹೇಳುವುದರಲ್ಲಿ ಹಾಗೂ ಹೆಣೆಯುವುದರಲ್ಲಿ ತುಂಬ ನಿಪುಣರು, ಅಷ್ಟೇ ನಿಸ್ಸೀಮರು. ತಲತಲಾಂತರದಿಂದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಪುರಾಣ ಪುಣ್ಯಕಥೆಗಳು, ಐತಿಹಾಸಿಕ, ಪೌರಾಣಿಕ ಜನಪದ ಮಹಾಕಾವ್ಯಗಳನ್ನು ಹೀಗೆ ಎಲ್ಲವನ್ನೂ ನಾಡಿನ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಮ್ಮ ಜನಪದ ಶೈಲಿಯ ಹಾಡುಗಾರಿಕೆ, ಬಯಲಾಟಗಳು ಮತ್ತು ಹರಿಕತೆಗಳಂತಹ ಸಾಂಸ್ಕøತಿಕ ಪ್ರಕಾರಗಳ ಮೂಲಕ ತಮ್ಮ ಕಲಾಗಾರಿಕೆಯನ್ನು ವ್ಯಕ್ತಪಡಿಸಿದ್ದಾರೆ. ದಾಸರೂ ಕತೆ ಹೇಳಿ ಹೊಟ್ಟೆ ತುಂಬಿಸಿಕೊಳ್ಳುವ, ಇಲ್ಲವೆ ಹಾಡನ್ನು ಹೇಳಿ ಭಿಕ್ಷೆ ಬೇಡುವ ಒಂದು ದಲಿತ ವರ್ಗಕ್ಕೆ ಸೇರಿದವರು ಹರಿದಾಸರಲ್ಲ; ಇವರು ದೊಂಬೆದಾಸರು. (ಬಿ.ಬಿ.ಮಹೇಶವಾಡಿ, ಕನ್ನಡ ಕಥಾಸೃಷ್ಟಿ, ಪು.ಸಂ.28) ಎಂದಿರುವ ಹೇಳಿಕೆ ಸಮಂಜಸವಾದುದಾಗಿದೆ.

ದೊಂಬಿದಾಸರು ಮುಖ್ಯವಾಗಿ ಲಾವಣಿ ಹೇಳುವುದರಲ್ಲಿ ಮತ್ತು ಯಕ್ಷಗಾನ ಅಭಿನಯಿಸುವುದರಲ್ಲಿ ವೈವಿಧ್ಯಮಯವಾದವರು. ಇದರ ಜೊತೆಗೆ ಕತೆ ಹೇಳುವುದರಲ್ಲಿ, ರಂಗಭೂಮಿ ಅಭಿನಯದಲ್ಲಿಯೂ ಕೂಡ ತಮ್ಮ ಕಲಾ ಪ್ರದರ್ಶನವನ್ನು ಜನಮೆಚ್ಚಿ ಮನಸೋಲುವಂತೆ ಮಾಡುತ್ತಾರೆ. ಇವರು ಕತೆಗಳನ್ನು ಹೇಳುವುದರಲ್ಲಿ ಅತಿ ಹೆಚ್ಚುಗಾರಿಕೆಯವರು. ಆ ಕತೆಗಳೆಂದರೆ, ಗೌರಮ್ಮನ ವಿವಾಹ, ಗಂಗೆ-ಗೌರಿ ಜಗಳ, ಬಾಲನಾಗಮ್ಮ, ಕೃಷ್ಣನ ಕತೆಗಳು, ಕೃಷ್ಣ-ಕೊರವಂಜಿ, ಬಂಜೆ ಹೊನ್ನಮ್ಮ, ರಾಜ ಸತ್ಯಭೋಜ, ರಾಮ-ಲಕ್ಷ್ಮಣರ ಕತೆ, ಪಾಂಡವರ ಕತೆ, ಇನ್ನೂ ಮೊದಲಾದ ಕತೆಗಳನ್ನು ಹಾಡಿ ರಂಜಿಸುತ್ತಾರೆ. ನಿದರ್ಶನವಾಗಿ 'ಬಂಜೆ ಹೊನ್ನಮ್ಮ' ನ ಕತೆಯನ್ನು ಕುರಿತಂತೆ; ಬಂಜೆತನದ ಅಪವಾದ, ಸಂಕಟ, ಸವತಿ ಮತ್ಸರದ ಅನಾಹುತ, ಮೊದಲಾದ ಸಂಗತಿಗಳನ್ನು ಕರಳು ಮಿಡಿಯುವಂತೆ ಹೇಳುತ್ತಾರೆ. ಬಂಜೆಯೆಂಬ ಕಾರಣಕ್ಕಾಗಿ ಆಕೆಯ ಅಕ್ಕತಂಗಿಯರೇ ಆಕೆಗೆ ಸಹಾನುಭೂತಿ ತೋರುವುದಿಲ್ಲ. ನೀರು ತರಲು ಹೋದರೆ ಬಂಜೆ ಹೊನ್ನಮ್ಮ ಮುಟ್ಟದಿರಲೆಂದು ಬಾವಿಯ ಜಲವೇ ಬತ್ತುತ್ತದೆ. ಈ ಸಂಗತಿಯ ಹಾಡನ್ನು ದೊಂಬಿದಾಸರು ತಮ್ಮ ಸಿರಿಕಂಠದಲ್ಲಿ

ಕುಂಟನಾದರೂ ಆಗಲಿ ಶಿವನೆ
ಕುರುಡನಾದರೂ ಹುಟ್ಟಲಿ ಶಿವನೆ
ಈವತ್ತಾದರೂ ಹುಟ್ಟಲಿ ಶಿವನೆ
ನಾಳೆ ಬೆಳಿಗ್ಗೆ ಸಾಯಲಿ ಶಿವನೆ
ಬಂಜೆ ಎಂಬೊ ಸೊಲ್ಲೂ ಶಿವನೆ
ಹೋದರೆ ಸಾಕಲ್ಲ ಶಿವನೆ

ಹೀಗೆ, ಬಂಜೆತನದ ಆತಂಕ ನೋವುಗಳ ತೀವ್ರತೆಯನ್ನು, ಎಂತಹವರ ಗಟ್ಟಿ ಮನಸ್ಸನ್ನು ನಡುಗಿಸುವಂತೆ ಹೇಳುತ್ತಾರೆ. ಬಂಜೆತನವನ್ನು ನೀಗಿಸುವಂತೆ ನಾನಾ ದೇವರನ್ನು ಪೂಜಿಸುವ, ಹರಕೆ ಕಟ್ಟಿಕೊಳ್ಳುವ, ಹತ್ತು ಹಲವು, ವ್ರತ-ನೇಮ ಮೊದಲಾದ ಮುಖ್ಯ ವಿವರಗಳಿಂದ ಈ ಕತೆ ಜೀವ ಪಡೆದುಕೊಂಡಿದೆ.

**ನಾಟಕ ವೃತ್ತಿ**

ದೊಂಬಿದಾಸರು ನಾಟಕದಲ್ಲಿ ಅಭಿನಯಿಸುವುದರಲ್ಲಿಯು ಸೈ ಎನಿಸಿಕೊಂಡವರು. ಇವರು ಆಡುವ ನಾಟಕಗಳಲ್ಲಿ ಸತ್ಯ ಹರಿಶ್ಚಂದ್ರ, ನಳದಮಯಂತಿ, ಸತ್ಯವ್ರತ, ಶ್ರೀಕೃಷ್ಣಪಾರಿಜಾತ, ಶ್ರೀ ಕೃಷ್ಣಲೀಲೆ, ಪ್ರೇಮ ಸತ್ಯಭೋಜ, ಮಾರ್ಕಂಡೇಯ, ಸಾರಂಗಧರ, ಗಂಗೆಗೌರಿ, ರಾಜಾವಿಕ್ರಮ, ಶನಿಕತೆ, ಭಕ್ತಪ್ರಹ್ಲಾದ ಇನ್ನು ಮುಂತಾದವು. ಹರಿಕಥೆಗಳನ್ನು ಮಾಡುವ ಇವರಿಗೆ, ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ. ಮೂಲತಃ ಭಿಕ್ಷೆ ಬೇಡುವ ಇವರು, ಊರೂರು ಸುತ್ತಿ ಬದುಕು ಕಳೆಯುತ್ತಾರೆ. ತಾವು ಯಾವ ಊರಿನಲ್ಲಿ ಬೀಡು ಬಿಟ್ಟಿರುತ್ತಾರೆಯೋ; ಆ ದಿವಸದ ರಾತ್ರಿ ಊರಿನ ಸ್ಕೂಲು ಮೈದಾನಗಳಲ್ಲೋ, ದೇವಸ್ಥಾನದ ಮುಂಭಾಗದಲ್ಲೋ ತಮ್ಮ ನಾಟಕ ರಂಗವನ್ನು ಹೂಡುತ್ತಾರೆ. ಅಲ್ಲಿ ತಮ್ಮ ಅಭಿನಯ ಪ್ರದರ್ಶಿಸಿ ಹೊಟ್ಟೆಬಟ್ಟೆಗೆ ದವಸ, ಧಾನ್ಯ, ಕಾಸು ಮೊದಲಾದವನ್ನು ಸಂಪಾದಿಸುತ್ತಾರೆ. ಹೆಂಗಸರು ನಾಟಕಗಳಲ್ಲಿ ಹೆಚ್ಚಾಗಿ ಭಾಗವಹಿಸುವುದಿಲ್ಲ. ಗಂಡಸರೇ ಎಲ್ಲಾ ಪಾತ್ರಗಳನ್ನೂ ಲೀಲಾಜಾಲವಾಗಿ ನಿರ್ವಹಿಸುತ್ತಾರೆ. ಸಮಯ ಸ್ಫೂರ್ತಿಯಿಂದಲೇ ಇವರ ನಾಟಕದ ಸಂಭಾಷಣೆ ಮತ್ತು ಹಾಡುಗಳು ಹುಟ್ಟಿಕೊಳ್ಳುತ್ತವೆ. ಇಂತವರೇ ಇಂತಹ ಪಾತ್ರಕ್ಕೆ ಮೀಸಲು ಎಂಬ ನಿಯಮ ಇರುವುದಿಲ್ಲ. ಯಾರು ಬೇಕಾದರೂ, ಉಳಿದ ಯಾವ ಪಾತ್ರವನ್ನಾದರೂ ಯಶಸ್ವಿಯಾಗಿ ಅಭಿನಯಿಸಬಲ್ಲರು. ಹಿಂದೆ ಇವರು ಯಕ್ಷಗಾನಗಳನ್ನು ಪ್ರದರ್ಶಿಸುವ ಕಲಾವಂತಿಕೆ ಇದ್ದುದರಿಂದಲೇ, ಅಲ್ಲಿಯ ಕಥಾವಸ್ತುಗಳನ್ನು ನಾಟಕವಾಗಿ ಪರಿವರ್ತಿಸುವ ಮೂಲಕ ತಮ್ಮಲ್ಲಿ ಅದಮ್ಯವಾಗಿ ಅಡಗಿರುವ ಅಪೂರ್ವ ಕಲಾಪ್ರತಿಭೆಯನ್ನು ಇವರು ಪ್ರದರ್ಶಿಸುತ್ತಾರೆ. ಒಟ್ಟಿನಲ್ಲಿ ದೊಂಬಿದಾಸರು ಕತೆಯನ್ನು ಹೇಳುವಂತೆಯೆ ಮೇಲೆ ತಿಳಿಸಿರುವ ನಾಟಕಗಳನ್ನು ಅಭಿನಯಿಸುವ ಮುಖೇನ ತಮ್ಮ ಸಿರಿವಂತ ಕಲಾಪ್ರೌಢಿಮೆಯನ್ನು ಪ್ರದರ್ಶಿಸುವುದು ನಿಜಕ್ಕೂ ಮೆಚ್ಚುವಂತಹದ್ದೆ.

ದೊಂಬಿದಾಸರು, ವಿಶಿಷ್ಟ ಸಾಂಸ್ಕøತಿಕ ಮತ್ತು ಸಂಪ್ರದಾಯವನ್ನು ತಮ್ಮ ನಿತ್ಯ ಬದುಕಿನಲ್ಲಿ ಮೈಗೂಡಿಸಿಕೊಂಡವರು. ನಾಟಕವನ್ನು ಆಡುವಾಗ, ಹರಿಕತೆಗಳನ್ನು ಹೇಳುವಾಗ ವಿಶಿಷ್ಟ ಉಡುಪನ್ನು ಧರಿಸುವ ಮೂಲಕ ಪ್ರೇಕ್ಷಕರ ಮನ ಗೆಲ್ಲುತ್ತಾರೆ. ಹೆಂಗಸರು ಸೀರೆ ಉಟ್ಟು ಬಲಕ್ಕೆ ಸೆರಗು ಹಾಕುತ್ತಾರೆ. ಹಣೆಗೆ ಒಚಿಟಿನಾಮ ಇಡುತ್ತಾರೆ. ಗಂಡಸರು ಹಾರೋಗಚ್ಚೆ ಹಾಕಿ ಮೇಲೆ ನಿಲುವಂಗಿ ತೊಡುತ್ತಾರೆ. ಸ್ಥಳೀಯ ಸಂಸ್ಕøತಿಯ ಪ್ರಭಾವವನ್ನು ತಮ್ಮ ಅಭಿನಯದಲ್ಲಿ ಅಳವಡಿಸಿಕೊಂಡು ಉತ್ತಮ ಅಭಿನಯ ತೋರುತ್ತಾರೆ.

ಒಟ್ಟಿನಲ್ಲಿ ಗಾಯನ ಕಲೆಗೆ ಹೆಸರಾದ ಈ ಸಮುದಾಯ, ಒಂದು ಕಡೆ ನೆಲೆ ನಿಲ್ಲದೆ ಬದುಕು ಕಂಡುಕೊಂಡವರು. ಕತೆ, ನಾಟಕ ಮತ್ತು ಲಾವಣಿಗಳನ್ನು ಹಾಡುತ್ತಲೆ, ತಮ್ಮ ಸಂಸ್ಕøತಿಯ ಛಾಪನ್ನು ಇವರು ಪ್ರೇಕ್ಷಕರ ಮನದಾಳದಲ್ಲಿ ಮೂಡಿಸಿದ್ದಾರೆ. ಈ ಸಮುದಾಯದಲ್ಲಿ ಯಾವುದೇ ಸಂಪ್ರದಾಯದ ಆಚರಣೆಗಳಿರಬಹುದು. ಅಂತಹದರಲ್ಲಿ ತಮ್ಮ ಮೂಲ ಸಂಸ್ಕøತಿಗೆ ಹೆಚ್ಚು ಒತ್ತು ನೀಡುವುದೇ ಈ ಜನಾಂಗದ ಒಂದು ವಿಶೇಷ ಎಂದು ಭಾವಿಸಬಹುದಾಗಿದೆ.